ರಾಮಣ್ಣ ಮೊದಲ ಬಾರಿಗೆ ದೇಶದಲ್ಲಿ ಸುದ್ದಿಯಾಗಿದ್ದು ದಾಂತೆವಾಡದ ಎರ್ರಬೊರೆ ಸಂತ್ರಸ್ತ ಶಿಬಿರದ ಮೇಲಿನ ದಾಳಿಯಲ್ಲಿ. 2006ರಲ್ಲಿ ನಡೆದ ದಾಳಿಯಲ್ಲಿ 800 ಮಾವೋವಾದಿಗಳು ಪಾಲ್ಗೊಂಡಿದ್ದರು. 25 ಮಂದಿ ಮೃತಪಟ್ಟರೆ, 250ಕ್ಕೂ ಹೆಚ್ಚು ಮಂದಿ ದಾಳಿಯ ನಂತರ ನಾಪತ್ತೆಯಾದರು. 2007ರಲ್ಲಿ ಛತ್ತೀಸ್‌ಗಡದ ಬಿಜಾಪುರದಲ್ಲಿ ಪೊಲೀಸರ ಮೇಲೆ ಪೆಟ್ರೋಲ್ ಬಾಂಬ್ ದಾಳಿ ನಡೆಯಿತು. ಈ ದಾಳಿಯ ಸಂಚು ರೂಪಿಸಿದ್ದವನೂ ರಾಮಣ್ಣನೇ. ದಾಳಿಯಲ್ಲಿ ಹುತಾತ್ಮರಾದ 55 ಮಂದಿಯಲ್ಲಿ ಹಲವರ ದೇಹಗಳು ಗುರುತು ಸಿಗದಷ್ಟು ವಿರೂಪಗೊಂಡಿದ್ದವು.

2010ರಲ್ಲಿ ಸುಕ್ಮಾದಲ್ಲಿದ್ದ ಸಿಆರ್‌ಪಿಎಫ್ ಶಿಬಿರದ ಮೇಲೆ ಸಂಘಟಿಸಿದ ದಾಳಿ ರಾಮಣ್ಣನ ಮತ್ತೊಂದು ದೊಡ್ಡ ಕಾರ್ಯಾಚರಣೆ. ಈ ದಾಳಿಯಲ್ಲಿ 76 ಯೋಧರು ಹುತಾತ್ಮರಾಗಿದ್ದರು. ಸತ್ತವರಲ್ಲಿ ಅನೇಕರ ದೇಹಗಳಲ್ಲಿ ಮುಂಗೈ ಮತ್ತು ಪಾದಗಳು ಛಿದ್ರವಾಗಿದ್ದವು. ಕೈಗಡಿಯಾರ ಮತ್ತು ಶೂ ಕಿತ್ತುಕೊಳ್ಳುವ ಆತುರದಲ್ಲಿ ಮುಂಗೈ ಮತ್ತು ಪಾದಗಳನ್ನೇ ಕಡಿದುಹಾಕಿದ್ದರು.

ಜನವರಿ 2013ರಲ್ಲಿ ಜಾರ್ಖಂಡ್‌ನ ಲಾತೆಹಾರ್‌ನಲ್ಲಿ ನಡೆದ ದಾಳಿ ರಾಮಣ್ಣನ ಕ್ರೌರ್ಯವನ್ನು ಬಿಂಬಿಸುವ ಮತ್ತೊಂದು ಕಾರ್ಯಾಚರಣೆ. ಸಿಆರ್‌ಪಿಎಫ್ ವಾಹನ ಸಾಲಿನ ಮೇಲೆ ದಾಳಿ ನಡೆಸಿದ ನಕ್ಸಲರು ಮೂವರು ನಾಗರಿಕರೂ ಸೇರಿ 12 ಮಂದಿಯನ್ನು ಕೊಂದಿದ್ದರು. ಹುತಾತ್ಮರಾದ ಯೋಧರೊಬ್ಬರ ಹೊಟ್ಟೆಯೊಳಗೆ 1.5 ಕೆ.ಜಿ. ತೂಕದ ಅತ್ಯಾಧುನಿಕ ಸ್ಫೋಟಕ ಇರಿಸಿದ್ದ ರಾಮಣ್ಣ. ಅಕಸ್ಮಾತ್ ಅದೇನಾದರೂ ಸಿಡಿಸಿದ್ದರೆ ಮರಣೋತ್ತರ ಪರೀಕ್ಷೆ ಮಾಡುತ್ತಿದ್ದ ವೈದ್ಯಕೀಯ ಸಿಬ್ಬಂದಿಯಷ್ಟೇ ಅಲ್ಲ, ಆಸ್ಪತ್ರೆಯಲ್ಲಿದ್ದ ಹಲವರು ಸಾವನ್ನಪ್ಪುತ್ತಿದ್ದರು.

ಅದೇ ವರ್ಷ ಝೀರಂ ಘಾಟಿಯಲ್ಲಿ ನಡೆದ ಮತ್ತೊಂದು ದಾಳಿ ಛತ್ತೀಸ್‌ಗಡದ ಕಾಂಗ್ರೆಸ್ ನಾಯಕತ್ವವನ್ನೇ ಹೊಸಕಿಹಾಕಿತ್ತು. ಸತ್ತ 35 ಮಂದಿಯಲ್ಲಿ ಕೇಂದ್ರ ಸಚಿವ ವಿದ್ಯಾಚರಣ್ ಶುಕ್ಲಾ, ನಾಯಕರಾದ ಮಹೇಂದ್ರ ಕರ್ಮ ಮತ್ತು ನಂದಕುಮಾರ್ ಪಟೇಲ್ ಸೇರಿದ್ದರು. ದಾಳಿಗೆ ಹೆದರಿಗೆ ನಕ್ಸಲರಿಗೆ ಶರಣಾಗಿದ್ದ ಮಹೇಂದ್ರ ಕರ್ಮ ಅವರನ್ನು 70 ಬಾರಿ ಇರಿದು ಕೊಲ್ಲಲಾಗಿತ್ತು.

## ಹಫ್ತಾ ವಸೂಲಿ

ರಾಮಣ್ಣನ ನೇತೃತ್ವದಲ್ಲಿ ಮಾವೋವಾದಿಗಳ ದಾಳಿಗಳಿಂದಾಗಿ ಬಸ್ತಾರ್ ಪ್ರದೇಶದಲ್ಲಿ ಅಭಿವೃದ್ಧಿ ಪ್ರಯತ್ನಗಳಿಗೆ ವ್ಯಾಪಕ ಹಿನ್ನಡೆಯಾಯಿತು. ರಸ್ತೆಗಳನ್ನು ಹಾಳುಮಾಡುವುದು, ಸೇತುವೆಗಳನ್ನು ಹಾಳು ಮಾಡುವುದು ಸಾಮಾನ್ಯವಾಗಿತ್ತು. ಮೇ 2007ರಲ್ಲಿ ಮೂರು ಹೈಟೆನ್ಷನ್ ವೈರ್ ಗೋಪುರಗಳನ್ನು ಸ್ಫೋಟಿಸಿದ ನಂತರ ಬಸ್ತಾರ್ ಪ್ರದೇಶ ಅಕ್ಷರಶಃ ಕತ್ತಲಲ್ಲಿ ಮುಳುಗಿತ್ತು. 11 ದಿನಗಳವರೆಗೆ ಅತ್ಯಗತ್ಯ ಸೇವೆಗಳು ಜನರಿಗೆ ಸಿಗಲಿಲ್ಲ.

ರಾಮಣ್ಣನ ಕಾರ್ಯಾಚರಣೆ ಬಸ್ತಾರ್‌ನ ಶ್ರೀಮಂತ ಬುಡಕಟ್ಟು ಸಂಸ್ಕೃತಿಗೂ ಧಕ್ಕೆ ತಂದಿತು. 1980ರಲ್ಲಿಯೇ ಮಾವೋವಾದಿಗಳು ಘೋಟುಲ್ (ಯುವಜನರ ಸ್ವಾತಂತ್ರ್ಯ) ಸಂಪ್ರದಾಯ ಮತ್ತು ವಾರದ ಸಂತೆಗಳನ್ನು ನಿಷೇಧಿಸಿದ್ದರು. ನಂತರದ ದಿನಗಳಲ್ಲಿ ಮಾವೋವಾದಿಗಳಿಗೆ ಮಾಮೂಲಿ ಕೊಡದ ವ್ಯಾಪಾರಿಗಳನ್ನು ಕೊಲ್ಲುವ ಹಂತಕ್ಕೂ ಇದು ಬೆಳೆಯಿತು.

ರಾಮಣ್ಣನ ನಾಯಕತ್ವದಲ್ಲಿಯೇ ಮಾವೋವಾದಿಗಳು ತೆಂಡುಪತ್ತಾ (ಬೀಡಿ ಕಟ್ಟಲು ಬಳಸುವ ಎಲೆ) ಗುತ್ತಿಗೆದಾರರಿಂದ ಪ್ರತಿಚೀಲಕ್ಕೆ ಇಷ್ಟು ಎಂದು ಮಾಮೂಲಿ ವಸೂಲಿ ಆರಂಭಿಸಿದ್ದು. ಬುಡಕಟ್ಟು ಜನರೂ ತಮ್ಮ ಆದಾಯದಲ್ಲಿ ಇಂತಿಷ್ಟು ಭಾಗವನ್ನು ನಕ್ಸಲರಿಗೆ ಕೊಡಬೇಕು ಎಂದು ತಾಕೀತು ಮಾಡಿದ್ದು. ದಂಡಕಾರಣ್ಯದಲ್ಲಿ ಮಾವೋವಾದಿಗಳ ವಾರ್ಷಿಕ ಖರ್ಚು ₹ 12 ಕೋಟಿ ಎಂದು ಅಂದಾಜಿಸಲಾಗಿದೆ. ಇದರಲ್ಲಿ ಕೇವಲ ತೆಂಡುಪತ್ತಾದಿಂದ ಅವರು ಗಳಿಸುವ ಆದಾಯವೇ ₹ 50 ಲಕ್ಷ ದಾಟುತ್ತದೆ ಎನ್ನುತ್ತಾರೆ ಛತ್ತೀಸ್‌ಗಡದಲ್ಲಿ ಕಾರ್ಯನಿರ್ವಹಿಸಿದ್ದ ಹಿರಿಯ ಐಪಿಎಸ್ ಅಧಿಕಾರಿ ಆರ್.ಕೆ. ವಿಜ್.

## ಯಾರು ಉತ್ತರಾಧಿಕಾರಿ?

ಸಂಘಟನೆಯನ್ನು ತನ್ನ ಬಿಗಿ ಹಿಡಿತದಲ್ಲಿರಿಸಿಕೊಂಡಿದ್ದ ರಾಮಣ್ಣನ ಸಾವಿನ ನಂತರ ಮಾವೋವಾದಿಗಳಲ್ಲಿ ಅಂತಃಕಲಹ ನಡೆಯಬಹುದು ಎಂದು ಛತ್ತೀಸಗಡ ಪೊಲೀಸರು ಶಂಕಿಸಿದ್ದಾರೆ. ಬಸ್ತಾರ್‌ನಲ್ಲಿ ರಾಮಣ್ಣನ ಸ್ಥಾನವನ್ನು ಮದ್ಕಮ್ ಹಿದ್ಮಾ ತುಂಬಬಹುದು ಎಂದು ಹೇಳಲಾಗುತ್ತಿದೆ. ಸ್ಥಳೀಯರಲ್ಲಿ ವ್ಯಾಪಕ ಬೆಂಬಲ ಹೊಂದಿರುವ ಮದ್ಕಮ್ ಹಿದ್ಮಾ ಸುಕ್ಮಾ ಮೂಲದವ. ಆದರೆ ಸಂಘಟನೆಯನ್ನು ಮುನ್ನಡೆಸುವಷ್ಟು ಸಂಘಟನಾತ್ಮಕ ಅಥವಾ ರಾಜಕೀಯ ಸಾಮರ್ಥ್ಯ ಇದೆ ಎಂದು ಈವರೆಗೂ ಸಾಬೀತುಪಡಿಸಿಲ್ಲ. ರಾಮಣ್ಣನಂಥದ್ದೇ ವ್ಯಕ್ತಿತ್ವ ರೂಢಿಸಿಕೊಂಡಿರುವ ಹಿದ್ಮಾಗೆ, ತನಗಿರುವ ಆದಿವಾಸಿ ಅಸ್ಮಿತೆಯೇ ಕುತ್ತಾಗಬಹುದು ಎಂಬ ವಿಶ್ಲೇಷಣೆಗಳೂ ಚಾಲ್ತಿಯಲ್ಲಿವೆ.

ಈವರೆಗೂ ಕೇಂದ್ರ ಸಮಿತಿಯಲ್ಲಿ ಬಹುತೇಕ ಆಂಧ್ರ ಮತ್ತು ತೆಲಂಗಾಣಗಳಿಂದ ಬಂದವರೇ ಇರುತ್ತಿದ್ದರು. ಛತ್ತೀಸಗಡದ ಸ್ಥಳೀಯರಿಗೆ ಅವಕಾಶ ಸಿಗುವುದು ಅಪರೂಪ.

ಈಗ ದೇಶದಲ್ಲಿ ಮಾವೋವಾದಿ ಚಟುವಟಿಕೆಗಳು ಕುಂಠಿತಗೊಂಡಿವೆ. ದಂಡಕಾರಣ್ಯದಲ್ಲಿಯೂ ಹೊಸಬರು ಸಂಘಟನೆಗೆ ಸೇರುತ್ತಿಲ್ಲ. ಸಿಪಿಐ (ಮಾವೋವಾದಿ) ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ಗಣಪತಿ ನಿವೃತ್ತರಾಗಿದ್ದು ಮತ್ತು ರಾಮಣ್ಣನ ಸಾವು ನಕ್ಸಲರಲ್ಲಿ ನಾಯಕತ್ವ ಬಿಕ್ಕಟ್ಟು ತಲೆದೋರುವಂತೆ ಮಾಡಿವೆ.

‘ಈಗ ನಮ್ಮ ಸಶಸ್ತ್ರಪಡೆಗಳು, ಸರ್ಕಾರ ಚುರುಕಾಗಬೇಕು. ನಕ್ಸಲರ ಬಿಗಿ ಹಿಡಿತ ಇರುವ ಪ್ರದೇಶಗಳಲ್ಲಿ ಚುರುಕಿನ ಕಾರ್ಯಾಚರಣೆ ನಡೆಸುವ ಜೊತೆಜೊತೆಗೆ ಅಭಿವೃದ್ಧಿ ಯೋಜನೆಗಳನ್ನು ಕ್ಷಿಪ್ರವಾಗಿ ಯೋಜಿಸಿ ಘೋಷಿಸಬೇಕು. ಆಗ ಮಾತ್ರ ಛತ್ತೀಸ್‌ಗಡದಲ್ಲಿ ನಕ್ಸಲ್ ಪ್ರಭಾವಕ್ಕೆ ದೊಡ್ಡಮಟ್ಟದಲ್ಲಿ ಕಡಿವಾಣ ಹಾಕಲು ಸಾಧ್ಯವಾಗುತ್ತದೆ’ ಎನ್ನುತ್ತಾರೆ ವಿಜ್.

## ನೆಲೆಸೀತೆ ಶಾಂತಿ

ರಾಮಣ್ಣನಂಥ ವ್ಯಕ್ತಿಯನ್ನು ಛತ್ತೀಸ್‌ಗಡದ ಬುಡಕಟ್ಟು ಜನರು ಒಪ್ಪಿಕೊಳ್ಳಲು, ಅವನ ನಾಯಕತ್ವದಲ್ಲಿ ನಡೆದ ದಾಳಿಗಳಲ್ಲಿ ದೊಡ್ಡಮಟ್ಟದಲ್ಲಿ ಪಾಲ್ಗೊಳ್ಳಲು ಕಾರಣವಾಗಿದ್ದು ಸಾಲ್ವ ಜುದಂ. ಬುಡಕಟ್ಟು ಜನರಲ್ಲಿಯೇ ಒಂದಿಷ್ಟು ಮಂದಿಯನ್ನು ಪ್ರತ್ಯೇಕಿಸಿ, ಅವರ ಕೈಗೆ ಬಂದೂಕು ಕೊಟ್ಟು, ನಕ್ಸಲ್ ನಿಗ್ರಹ ಕಾರ್ಯಾಚರಣೆಗೆ ಬಳಸಿಕೊಳ್ಳುವ ಈ ದಳಗಳ ಉಪಟಳಕ್ಕೆ ಜನರು ರೋಸಿಹೋಗಿದ್ದರು. ಜನರನ್ನು ಬೇಕಾಬಿಟ್ಟಿ ಒಕ್ಕಲೆಬ್ಬಿಸುವುದು, ಭ್ರಷ್ಟಾಚಾರ, ಅಭಿವೃದ್ಧಿ ಹೆಸರಿನಲ್ಲಿ ನಡೆಯುತ್ತಿದ್ದ ಅನಾಚಾರಗಳಿಂದಾಗಿ ಜನರಲ್ಲಿ ಮಡುಗಟ್ಟಿದ್ದ ಸಿಟ್ಟು ಅವರ ರಟ್ಟೆಗೆ ಬರುವಂತೆ ಮಾಡಿದ್ದು ರಾಮಣ್ಣನ ಚಾಕಚಕ್ಯತೆ.

ಈಗ ಛತ್ತೀಸ್‌ಗಡ ಬದಲಾಗಿದೆ. ನಕ್ಸಲ್ ಚಳವಳಿಗೆ ಸೇರಲು ಮೊದಲಿನಂತೆ ಜನರು ಒಲವು ತೋರುತ್ತಿಲ್ಲ. ಸಂಘಟನಾತ್ಮಕ ಚಾಕಚಕ್ಯತೆ ಇರುವ ನಾಯತ್ವದ ಕೊರತೆಯೂ ಇದೆ. ಇನ್ನಾದರೂ ಛತ್ತೀಸ್‌ಗಡದಲ್ಲಿರುವ ಕಾಂಗ್ರೆಸ್ ಸರ್ಕಾರದೊಂದಿಗೆ ಕೇಂದ್ರ ಸರ್ಕಾರ ಕೈಜೋಡಿಸಿ ಅಭಿವೃದ್ಧಿ ಯೋಜನೆಗಳನ್ನು ಆದ್ಯತೆ ಮೇರೆಗೆ ಘೋಷಿಸಿ, ಅನುಷ್ಠಾನಕ್ಕೆ ತರಬೇಕು. ಕೇವಲ ಬಂದೂಕಿನಿಂದ ಜನರ ಸಿಟ್ಟು ತಣಿಯದು. ಅದಕ್ಕೆ ಬದುಕು ಸುಧಾರಿಸುವ ಕನಸು ಬಿತ್ತಬೇಕು. ಅವರು ಇಷ್ಟಪಡುವಂಥ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಬದ್ಧತೆಯ ಅಭಿವೃದ್ಧಿ ಮಂತ್ರಬೇಕು. ■

